# 4 ನೇ ಅಪರ ಮುಖ್ಯ ಮಹಾನಗರ ದಂಡಾಧಿಕಾರಿಯವರ ನ್ಯಾಯಾಲಯ
# ಬೆಂಗಳೂರು

ಸಿಸಿ ನಂ. 22105/18 ಚಾಸಾಃ 2 ಪ್ರಾಸಾ ಃ 1

ಸಾಕ್ಷಿದಾರರ ಹೆಸರು ಃ ಧ್ರುವರಾಜ್
ತಂದೆಯ ಹೆಸರು ಃ ನಾಗರಾಜ್
ವಯಸ್ಸು ಃ 28 ವರ್ಷ
ಕೆಲಸ ಃ ಸ್ಟೋರ್ ಮ್ಯಾನೇಜರ್, ಬಾಟಾ , ಮಂಗಳೂರು
ವಾಸ ಃ ಮಂಗಳೂರು

ಸಾಕ್ಷಿಯನ್ನು ದಿಃ 13.12.2022 ರಂದು ಕರೆಯಿಸಿ ಪ್ರಮಾಣ ವಚನ ಬೋದಿಸಲಾಯಿತು.
ಮುಖ್ಯವಿಚಾರಣೆ ಃ ಹಿ.ಸಾ.ಸ.ಅ ರವರಿಂದಃ

1. ನಾನು 2017 ನೇ ಇಸವಿಯಲ್ಲಿ ಬೆಂಗಳೂರಿನ ಇಂದಿರಾ ನಗರ ದಲ್ಲಿ ವಾಸವಾಗಿದ್ದೆ ಮತ್ತು ಇಂದಿರಾ ನಗರದಲ್ಲಿರುವ ಬಾಟಾ ಶೋ ರೂಂ ನಲ್ಲಿ ಕೆಲಸ ಮಾಡುತ್ತಿದ್ದೆ.

2. ನಾನು ಈಗ ಒಂದು ದಾಖಲಾತಿಯನ್ನು ನೋಡುತ್ತಿದ್ದು ಇದರಲ್ಲಿ ನನ್ನ ಸಹಿ ಇದ್ದು ಇದು ನನ್ನ ಸಹಿಯಾಗಿರುತ್ತದೆ. ಸಾಕ್ಷಿಯು ದಿಃ 15-06-2017 ರ ಸ್ಥಳ ಪಂಚನಾಮೆಯಲ್ಲಿರುವ ಅವರ ಸಹಿಯನ್ನು ನೋಡಿ ಗುರುತಿಸಿದ್ದು ಅದನ್ನು ನಿಪಿ 1 ಎಂದು ಸಾಕ್ಷಿಯ ಸಹಿಯನ್ನು ನಿಪಿ 1(ಎ) ಎಂದು ಗುರುತಿಸಲಾಯಿತು.

3. ನಾನು ಇಂದಿರಾ ನಗರ ಬಾಟಾ ಶೋರೂಂ ನಲ್ಲಿ ಕೆಲಸ ಮಾಡುವಾಗ ಪೊಲೀಸರು ಸಾಯಂಕಾಲ ನಮ್ಮ ಶೋರೂಂ ಗೆ ಬಂದಿದ್ದರು. ಆ ಸಮಯದಲ್ಲಿ ಪೊಲೀಸರು ಎನ್ ಕ್ವರಿ ಮಾಡಿದರು ನಾನು ಆ ಸಮಯದಲ್ಲಿ ಇದಕ್ಕೆ ಸಹಿ ಮಾಡಿದ್ದೇನೆ. ಅಜಿತ್ ರವರು ಚಾರ್ಜ್ ಟ್ರಾನ್ಸಫರ್ ಆಗಬೇಕಾದರೆ ಸ್ವಲ್ಪ ಹಣ ಶಾರ್ಟೇಜ್ ಆಗಿತ್ತು. ಆಗ ನಮ್ಮ ಬಾಟಾ ಕಂಪನಿಯವರು ಕಂಪ್ಲೇಂಟ್ ಮಾಡಿದ್ದರು. ಆ ಸಮಯದಲ್ಲಿ ಪೊಲೀಸರು ಎನ್ ಕ್ವೈರಿ ಗೆ ಬಂದಿದ್ದರು. ಪೊಲೀಸರು ನಮ್ಮ ಬಾಟಾ ಶೋರೂಂ ಗೆ ಬಂದಾಗ ರಮೇಶ್ ಮತ್ತು ಜಯಂತ್ ರವರು ಇದ್ದರು. ಜಯಂತ್ ರವರು ಪೊಲೀಸರಿಗೆ ನಮ್ಮ ಶೋರೂಂ ನಲ್ಲಿನ ಜಾಗವನ್ನು ತೋರಿಸುತ್ತಿದ್ದರು. ನಾನು ಇದರಲ್ಲಿ ಏನು ಬರೆದಿದೆ ಎಂದು ತಿಳಿದು ಕೊಂಡು ಸಹಿ ಮಾಡಿದ್ದೇನೆ.

ಪಾಟೀ ಸವಾಲುಃ ಶ್ರೀ ಎಮ್.ಎ.ಸಿ ವಕೀಲರಿಂದ ಆರೋಪಿಯ ಪರವಾಗಿಃ

4. ನನಗೆ ನಿಖರವಾಗಿ ಯಾವ ದಿನಾಂಕದಂದು ನಿಪಿ 1 ರಲ್ಲಿ ಸಹಿ ಮಾಡಿದ್ದೇನೆಂದು ಹೇಳಲು ಬರುವುದಿಲ್ಲ. ನಾನು ಇದಕ್ಕೆ ನಮ್ಮ ಶೋರೂಂ ನಲ್ಲಿ ಸಹಿ ಮಾಡಿದ್ದೇನೆ. ನಿಪಿ 1 ಕ್ಕೆ ನೀವು ಸಹಿ ಮಾಡಬೇಕು ಎಂದು ಯಾರೂ ಹೇಳಿದರು ಎಂದರೆ ಪೊಲೀಸ್ ನವರು ಎನ್ ಕ್ವೈರಿ ಗೆ ಬಂದಿದ್ದಾರೆ ಎಂದು ಜಯಂತ ದೋರಾ ರವರು ನನಗೆ ಹೇಳಿದರು. ನೀವು ಚಾಸಾ 1 ರವರಿಗೆ ಅನುಕೂಲವಾಗಲಿ ಎಂದು ಅವರ ಮಾತು ಕೇಳಿಕೊಂಡು ಠಾಣೆಯಲ್ಲಿ ಸಹಿ ಮಾಡಿದ್ದೀರಿ ಎಂದರೆ ಸರಿಯಲ್ಲ.

ಮರು ವಿಚಾರಣೆಃ ಹಿ ಸ ಸ ಅ ರವರು ಇಲ್ಲ ಎಂದು ತಿಳಿಸಿರುತ್ತಾರೆ.

(ಸಾಕ್ಷಿಯ ಹೇಳಿಕೆಯನ್ನು ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು. ಸಾಕ್ಷಿಯ ಎದುರಿನಲ್ಲಿ ಹೇಳಿದ ಮೇಲೆ ಸರಿ ಇದೆ ಎಂದು ಒಪ್ಪಿ ಸಹಿ ಮಾಡಲಾಗಿದೆ.)

ಓ ಹೇ ಕೇ ಸ ಇ ಒ

4 ನೇ ಅ ಮು ಮ ದಂ ನ್ಯಾ